ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 32-39
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪ್ರಾದೇಶಿಕ ಸಾಹಿತ್ಯದ ಪರಿಕಲ್ಪನೆ ಮತ್ತು ಕಾರಂತರ ಕಾದಂಬರಿಗಳು

**ಶಾರದಾ ಜಿ. ಪಿ**

ಸಂಶೋಧನಾ ವಿದ್ಯಾರ್ಥಿ, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Abstract:**

*ಪ್ರದೇಶವು ದೇಶದ ಒಂದು ಭಾಗ. ದೇಶವು ಹಲವು ವೈವಿಧ್ಯಮಯ ಭೌಗೋಳಿಕ ಪರಿಸರವನ್ನೊಳಗೊಂಡಿರುತ್ತದೆ. ಪ್ರತಿ ವಿಭಿನ್ನ ಪರಿಸರಕ್ಕೆ ತನ್ನದೇ ಆದ ಭಾಷೆ, ಜನಾಂಗ, ಸಂಸ್ಕೃತಿಗಳಿರುತ್ತವೆ. ವೈವಿಧ್ಯಮಯ ಸಾಂಸ್ಕೃತಿಕ ಅಂಶಗಳ ಕಾರಣದಿಂದಾಗಿಯೇ ಆ ಪ್ರದೇಶವು ಹಾಗೂ ಪ್ರದೇಶದ ಕಾರಣದಿಂದ ಅಲ್ಲಿರುವ ಸಾಂಸ್ಕೃತಿಕ ಅಂಶಗಳು ವಿಶಿಷ್ಟತೆಯನ್ನು ಪಡೆಯುತ್ತವೆ. ಒಂದರ ಅನನ್ಯತೆಗೆ ಮತ್ತೊಂದು ಪೂರಕವಾಗಿರುತ್ತವೆ. ವಸಾಹತುಶಾಹಿ ಸಂದರ್ಭದಲ್ಲಿ ದೊರೆತರೆ ಹೊಸ ಅನುಭವ ಹಾಗೂ ಸ್ವಾತಂತ್ರ್ಯ ಚಳುವಳಿಯ ಜಾಗೃತಿ ಈ ಎರಡು ರೀತಿಯ ಸಂವೇದನೆಗಳು ಸರಿದೂಗಿಸುವ ಸವಾಲು ಆರಂಭಘಟ್ಟದ ಕನ್ನಡ ಸಾಹಿತ್ಯಕ್ಕೆ ಕಂಡುಬಂದಿತು. ಇಂಗ್ಲಿಷ್ ಸಾಹಿತ್ಯವನ್ನು ಅರಗಿಸಿಕೊಳ್ಳುವುದರ ಜೊತೆ ಸಾಮಾಜಿಕ ಜೀವನಕ್ಕೆ ಸ್ಪಂದಿಸಬೇಕಾಗಿದ್ದ ಅಗತ್ಯದಿಂದಾಗಿಯೇ ವಾಸ್ತವವಾದಿ ಕಥನ ಸ್ವರೂಪ ಈ ಸಂದರ್ಭದಲ್ಲಿ ಸೂಕ್ತವಾಯಿತು. ವಾಸ್ತವವಾದಿ ಕಥನ ಶೈಲಿಯಲ್ಲಿ ಪ್ರಾದೇಶಿಕತೆಯೂ ಕಂಡುಬಂದಿದೆ. ಒಂದರ್ಥದಲ್ಲಿ ವಾಸ್ತವಿಕತೆಯ ಭಾಗವೆಂದು ಪ್ರಾದೇಶಿಕತೆಯನ್ನು ಪರಿಭಾವಿಸಿದರೆ ತಪ್ಪಾಗದು.*

**Keywords:** *ಕನ್ನಡ ಸಾಹಿತ್ಯ, ಪ್ರಾದೇಶಿಕ ಸಾಹಿತ್ಯ, ಕನ್ನಡ ಕಾದಂಬರಿ, ಶಿವರಾಮ ಕಾರಂತ.*

## ಪೀಠಿಕೆ

ದೇಶಿಯತೆಯ ಪರಿಕಲ್ಪನೆಯೊಂದೆ ಇದ್ದಾಗ್ಯೂ ಪ್ರಾದೇಶಿಕತೆಯ ಪರಿಕಲ್ಪನೆಯ ಕಂಡುಬಂದದ್ದು ಅದರ ಮಹತ್ವವನ್ನು ತಿಳಿಸುತ್ತದೆ. ಆದರೆ ಸೈದ್ಧಾಂತಿಕವಾಗಿ ದೇಶಿಯತೆಯ ಬಗೆಗೆ ನಡೆದಷ್ಟು ಚರ್ಚೆ ಪ್ರಾದೇಶಿಕತೆಯ ಬಗೆಗೆ ನಡೆದಿಲ್ಲ. ಪ್ರಾದೇಶಿಕತೆ 'ದೇಶಿಯತೆ'ಯ ನೆರಳಿನಲ್ಲಿಯೇ ಕಂಡುಬಂದಿರುವಂತಹದ್ದು. ಅದರ ಭಾಗವಾಗಿರು ವಂತದ್ದು, ದೇಶಿವಾದದ ಹಿನ್ನೆಲೆಯಲ್ಲಿಯೇ ಇದರ ವ್ಯಾಖ್ಯಾನವನ್ನು ರಾಜೇಂದ್ರಚೆನ್ನಿಯವರು ಹೀಗೆ ಕಟ್ಟಿಕೊಡುತ್ತಾರೆ. "ಒಂದು ಸಾಹಿತ್ಯ ಪ್ರಾದೇಶಿಕ ಸತ್ವವನ್ನು, ಆ ಸಾಹಿತ್ಯವು ಹುಟ್ಟಿಕೊಳ್ಳುವ ಭಾಷಾ ಸಮುದಾಯದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಮತ್ತು ಸಾಹಿತ್ಯಕ್ಕಿರುವ ತನ್ನದೇ ಆದ ಸ್ವಾಯುತ್ತತೆಯನ್ನು ಗುಣಾತ್ಮಕವೆಂದು ಒಪ್ಪಿಕೊಳ್ಳುವ ಧೋರಣೆ ಅಥವಾ ಸಿದ್ಧಾಂತ, ದೇಶಿವಾದವೆನ್ನುವ ಪದದಿಂದಲೇ ಸ್ಪಷ್ಟವಾಗುವಂತೆ ಅದರ ಪರಿಕಲ್ಪನೆಗೆ ಒಂದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶದಲ್ಲಿ ಬದುಕುವ ಭಾಷಾ ಸಮುದಾಯವೊಂದರ ಅಸ್ತಿತ್ವ ಅವಶ್ಯಕವಾಗಿದೆ. ಆದರೆ ಈ ಪರಿಕಲ್ಪನೆಯಲ್ಲಿ ಕೇವಲ ಭೌಗೋಳಿಕ ಅಂಶಕ್ಕೆ ಮಹತ್ವವನ್ನು ಕೊಟ್ಟು ಬಿಟ್ಟರೆ ಅದು ದೇಶಿವಾದಕ್ಕಿಂತ ಭಿನ್ನವಾಗಿ ಪ್ರಾದೇಶಿಕತೆಯ ಪರಿಕಲ್ಪನೆಯಾಗಿ ಬಿಡುತ್ತದೆ" (ಸುಮತಿ, 2010.

**Please cite this article as:** ಶಾರದಾ, ಜಿ. ಪಿ. (2024). ಪ್ರಾದೇಶಿಕ ಸಾಹಿತ್ಯದ ಪರಿಕಲ್ಪನೆ ಮತ್ತು ಕಾರಂತರ ಕಾದಂಬರಿಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(4), 32–39

ಪುಟ–28) ದೇಶಿವಾದದ ಲಕ್ಷಣವು ಪ್ರಾದೇಶಿಕತೆಯ ಲಕ್ಷಣವೂ ಆಗಿದೆ. ದೇಶಿವಾದದ ಭಾಗವಾಗಿ ಪ್ರಾದೇಶಿಕತೆಯ ವ್ಯಾಖ್ಯಾನ ಒಪ್ಪಿತ ವಿಚಾರವೆ ಆದರೆ ಇದರೊಂದಿಗೆ ಒಪ್ಪಿಕೊಳ್ಳಬೇಕಾದ ಇನ್ನೊಂದು ವಿಚಾರವನ್ನು ಮರೆಯವಂತಿಲ್ಲ. ದೇಶಿವಾದ ಹುಟ್ಟಿಗೆ ಕಾರಣವಾದಂತಹ ವಿಚಾರಗಳನ್ನು ಪ್ರಾದೇಶಿಕತೆಗೆ ಅನ್ವಯಿಸುವುದು ತಪ್ಪೆನಿಸಲಾರದು. ದೇಶಿವಾದದ ಆವಿರ್ಭಾವಕ್ಕೆ ಕಾರಣವಾಗಿದ್ದ ಅಂಶವನ್ನು ಗಿರಡ್ಡಿಯವರು ಈ ರೀತಿ ಗುರುತಿಸುತ್ತಾರೆ. "ಸಾಹಿತ್ಯದಲ್ಲಿ ದೇಶಿವಾದವೆಂದರೆ, ಲೇಖಕನ ತಾನು ಬೆಳೆದು ಒಂದು ಸಮಾಜ, ಸಂಸ್ಕೃತಿ, ಪರಂಪರೆಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವುದು; ಅವುಗಳೊಂದಿಗೆ ಆತ್ಮೀಯವಾದ, ಸೃಜನಶೀಲ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದು; ನಮ್ಮ ಸಾಹಿತ್ಯವು ಪಾಶ್ಚಾತ್ಯೀಕರಣದ ತೀವ್ರತೆಯ ಬಗ್ಗೆ ಎಚ್ಚರವಹಿಸುವುದು; ಮುಖ್ಯವಾಗಿ, ಅಂತರಾಷ್ಟ್ರೀಯತೆಯ ಹೆಸರಿನಲ್ಲಿ ನಾವು ನಮ್ಮ ನೆಲದಲ್ಲಿಯ ಬೇರುಗಳನ್ನು ಕಳೆದುಕೊಳ್ಳುವ ಅಪಾಯಿದಿಂದ ರಕ್ಷಿಸಿಕೊಳ್ಳುವುದು. ಹಾಗೆಂದು ಇದು ಪರಂಪರೆಯ ಅಂಧಾನುಕರಣೆಯೂ ಅಲ್ಲ" (ಸುಮತಿ, 2010. ಪುಟ–28).

ದೇಶಿವಾದವು ತನ್ನತನದ ಅಭಿವ್ಯಕ್ತಿಯಲ್ಲದೆ, 'ಅನ್ಯ'ದರೊಂದಿಗೆ ತನ್ನನ್ನು ಉಳಿಸಿಕೊಳ್ಳುವಿಕೆ ಯಾಗಿದೆ. ಅನ್ಯ ಸಂಸ್ಕೃತಿಯ ಹೇರಿಕೆಯ ಅಪಾಯವನ್ನು ಮೀರುವಿಕೆಯಾಗಿ ಪ್ರಾದೇಶಿಕತೆಯು ಕಂಡುಬಂದಿತು. ಪ್ರಾದೇಶಿಕತೆಯನ್ನು ಕುರಿತು ಬಿಡಿಬಿಡಿಯಾಗಿ ನಡೆದ ಕೆಲ ಚರ್ಚೆಗಳ ಅವಲೋಕನ ಅದರ ಸ್ವರೂಪದ ರೂಪುರೇಷಗಳನ್ನು ತಿಳಿಸುತ್ತದೆ. ನಿರ್ದಿಷ್ಟ ಪ್ರದೇಶದ ಭೌಗೋಳಿಕ, ಸಾಮುದಾಯಿಕ, ಸಾಂಸ್ಕೃತಿಕ, ಭಾಷಿಕ ಅಧ್ಯಯನದ ಹಿನ್ನೆಲೆಯಲ್ಲಿ ಪ್ರಾದೇಶಿಕತೆಯು ಮುಖ್ಯವಾಗಿದೆ. ಈ ನಿರ್ದಿಷ್ಟ ವಿಷಯಗಳ ಹಿನ್ನೆಲೆಯಲ್ಲಿ ಪ್ರಾದೇಶಿಕತೆಯನ್ನು ಅರ್ಥೈಸುವ ವಿದ್ವಾಂಸರ ವಿಚಾರಗಳು ಮುಖ್ಯವೆನಿಸುತ್ತವೆ. ನಿರ್ದಿಷ್ಟ, ಭೌಗೋಳಿಕ ಚೌಕಟ್ಟೊಂದು ಪ್ರಾದೇಶಿಕತೆಯ ಅಧ್ಯಯನಕ್ಕೆ ಮುಖ್ಯವೆಂದು ತಿಳಿಸುವ ಡಾ. ಬಿ.ಎ. ವಿವೇಕ ರೈ ಅವರ ವಿಚಾರಗಳು ಪ್ರಮುಖವಾದಂತವುಗಳು.

1. ನಿರ್ದಿಷ್ಟ ಭೌಗೋಳಿಕ ಪ್ರದೇಶವೊಂದರ ವೈಶಿಷ್ಟ್ಯಗಳನ್ನು ಗುರುತಿಸಲು ಅನುಕೂಲವಾಗುವಂತೆ ಕೆಲವು ವಿಶಿಷ್ಟ ಅಂಶಗಳನ್ನು ಶೋಧಿಸುವುದು.
2. ಸಂವಹನ ವಿನ್ಯಾಸಗಳನ್ನು ಗಮನಿಸುವುದು ಮತ್ತು ಅಂತಹ ಸಂವಹನ ಜಾಲವು ವಿಸ್ತಾರಗೊಳ್ಳುವ ಭೌಗೋಳಿಕ ಪ್ರದೇಶವನ್ನು ಗುರುತಿಸುವುದು.
3. ನಿರ್ದಿಷ್ಟ ಸಂಗತಿಯೊಂದನ್ನು ಒಂದು ಭೌಗೋಳಿಕ ಪ್ರದೇಶದಲ್ಲಿ ಗುರುತಿಸುವುದು ಮತ್ತು ಆ ಪ್ರದೇಶದ ಕೇಂದ್ರ ಸ್ಥಳದಿಂದ ದೂರ ಹೋದಂತೆಲ್ಲಾ ಅದು ಕಣ್ಮರೆಯಾಗಿತ್ತಾ ಹೋಗುವ ರೀತಿಯನ್ನು ಗಮನಿಸುವುದು.
4. ಕೆಲವು ನಿರ್ದಿಷ್ಟ ಅಂಶಗಳ ಭೌಗೋಳಿಕ ಮೇರೆಗಳನ್ನು ಗುರುತಿಸುವುದು, ಅಂತಹ ವಿಶಿಷ್ಟ ಸಂಗತಿಗಳು ಸಂಪೂರ್ಣವಾಗಿ ಕಣ್ಮರೆಯಾಗುವ ಪ್ರಾದೇಶಿಕ ಹೊರ ಮೇರೆಯನ್ನು ಗಮನಿಸುವುದು.

ಪ್ರಾದೇಶಿಕ ಅಧ್ಯಯನದ ಈ ನಾಲ್ಕು ದೃಷ್ಟಿಕೋನಗಳೂ ಪರಿಸ್ಪರ ಪೂರಕವಾದವು. ಪ್ರತಿಯೊಂದು ದೃಷ್ಠಕೋನವೂ ಪ್ರಾದೇಶಿಕತೆಯನ್ನು ಕುರಿತು ಒಂದು ಭಿನ್ನವಾದ ಒತ್ತನ್ನು ಕೊಡುತ್ತವೆ. ಒಂದು ಭಿನ್ನವಾದ ಆಲೋಚನೆಯ ರೀತಿಯನ್ನು ಕೊಡುತ್ತದೆ. ಯಾವುದೇ ದೃಷ್ಟಿಕೋನವನ್ನು ತೆಗೆದುಕೊಂಡರೂ ಪ್ರಾದೇಶಿಕ ಪರಿಕಲ್ಪನೆಯಲ್ಲಿ ಭೌಗೋಳಿಕ ಆಯಾಮವು ಪ್ರಾದೇಶಿಕತೆಯ ಕೇಂದ್ರಿಯ ದೃಷ್ಠಿಯಾಗಿರುತ್ತದೆ. (ಸುಮತಿ, 2010. ಪುಟ–29).

ಇಲ್ಲಿ ಒಂದು ನಿರ್ದಿಷ್ಟ ಪ್ರದೇಶ ಹಾಗೂ ಅಲ್ಲಿನ ವಿಶಿಷ್ಟ ಅಂಶಗಳ ನೆಲೆಯಲ್ಲಿ ಪ್ರಾದೇಶಿಕತೆಯು

ನಿರ್ವಚನಗೊಂಡಿದೆ. ಪ್ರಾದೇಶಿಕ ಮೇರೆಗೆ ಅಲ್ಲಿನ ವೈಶಿಷ್ಟ್ಯಗಳ ಗುರುತಿಸುವಿಕೆಯ ಆದಿ ಮತ್ತು ಅಂತ್ಯ, "ಪ್ರಾದೇಶಿಕತೆ ಒಂದು ಪ್ರದೇಶದ ಸಾಂಸ್ಕೃತಿಕ ವಿಭಿನ್ನತೆಯನ್ನು ಆ ಜನ ಸಮುದಾಯದ ಸಾಮೂಹಿಕ ಚೆಲುವನ್ನು ಎತ್ತಿಹಿಡಿಯುವ ಪರಿಕಲ್ಪನೆ, ವೈಯಕ್ತಿಕ ಅಭಿವ್ಯಕ್ತಿಗಿಂತ ಇಲ್ಲಿ ಸಾಮೂಹಿಕ ಅಭಿವ್ಯಕ್ತಿ ಮಹತ್ವದ್ದಾಗುತ್ತದೆ. ಪ್ರತಿ ಜನಸಮುದಾಯವೂ ಬದುಕನ್ನು ದಕ್ಕಿಸಿಕೊಳ್ಳುವ ಒಂದು ಪ್ರಾದೇಶಿಕ ಶೈಲಿಯನ್ನು ಹೊಂದಿರುತ್ತದೆ. ಪ್ರತಿ ಪ್ರದೇಶಕ್ಕೂ ತನ್ನದೇ ಆದ ಜಾನಪದ ಛಾಪು ಮತ್ತು ಛಾತಿ ಇರುತ್ತದೆ. ಇದೇ ಪ್ರಾದೇಶಿಕತೆಯ ಜೀವಾಳ. (ಬಿದರಹಳ್ಳಿ ನರಸಿಂಹಮೂರ್ತಿ, ಪ್ರಾದೇಶಿಕತೆಯ ಒಳನೋಟಗಳು–ಶೂದ್ರ. ಪುಟ 3). ಬದುಕಿನ ವಿಶಿಷ್ಟ ಶೈಲಿ ಹಾಗೂ ಸಂಸ್ಕೃತಿಯ ಅನನ್ಯತೆಯ ಮುಖೇನ ಪ್ರಾದೇಶಿಕತೆಯ ಈ ವ್ಯಾಖ್ಯಾನ ನಿರ್ವಹಿಸುತ್ತದೆ. "ಒಂದು ಪ್ರದೇಶದ ಪ್ರಾದೇಶಿಕತೆ ಎಂಬುದು ಅದರ ಭೌಗೋಳಿಕ ಭಾಷಿಕತೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳಲ್ಲಿ ವ್ಯಕ್ತವಾಗುತ್ತದೆ. ಈ ಪ್ರಾದೇಶಿಕ ವಿಭಿನ್ನಾಂಗಗಳು ಮತ್ತೊಂದು ಪ್ರದೇಶದ ಇಂಥವೇ ಅಂಶಗಳಿಗಿಂತ ವಿಶಿಷ್ಟವೂ, ವಿನೂತನವೂ ಆಗಿದ್ದಾಗ ಮಾತ್ರ ಅವು ಗಮನಾರ್ಹವಾಗುತ್ತವೆ" (ಶಿವರಾಮ ಕಾಡನಕುಪ್ಪೆ, 2003. ಪುಟ–37). ಈ ಮೇಲಿನ ಎಲ್ಲಾ ಅಭಿಪ್ರಾಯಗಳು ನಿರ್ದಿಷ್ಟ ಪ್ರದೇಶವೊಂದಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕತೆಯ ಚಹರೆಗಳನ್ನು ತೆರೆದಿಡುತ್ತವೆ. ವ್ಯಾಖ್ಯಾನಗಳನ್ನು ಗಮನಿಸಿದಾಗ ಸಹ ದೇಶಿಯತೆಯ ಉಗಮಕ್ಕೆ ಕಾರಣವಾದ ಅನ್ಯ ಸಂಸ್ಕೃತಿಯಿಂದಾಗಿ ಎದುರಾದ ವಿಸ್ಮೃತಿಯ ಆತಂಕವನ್ನು ಎದುರಿಸುವಂತಹ ಸಂದರ್ಭದಲ್ಲಿಯೇ ಪ್ರಾದೇಶಿಕತೆಯ ಆವಿರ್ಭಾವ ಆಗಿದೆ ಎನ್ನಬಹುದು. ಹಾಗಾಗಿ ಭಾಷಿಕ, ಜನಾಂಗಿಕ, ಸಾಂಸ್ಕೃತಿಕ ಅಭದ್ರತೆಯ ಆತಂಕವು ಪ್ರಾದೇಶಿಕತೆಯ ಆಗಮನದ ಅಗತ್ಯ ವಾತಾವಣರವನ್ನು ರೂಪಿಸಿತು.

ಅನ್ಯ ಸಂಸ್ಕೃತಿಯ ಜನರು ನಮ್ಮ ನೆಲದಲ್ಲಿ ನೆಲೆ ಪಡೆದಿದ್ದು ಸಮಾಜದಲ್ಲಿ ಸಾಂಸ್ಕೃತಿಕ ಅಂತರವನ್ನು ಉಂಟುಮಾಡಿತು. ಇದರಿಂದ ದೇಶಿಯರಲ್ಲಿ ಉಂಟಾದ ಭಾಷಿಕ, ಸಾಂಸ್ಕೃತಿಕ ಹಾಗೂ ಜನಾಂಗೀಯ ಅಭದ್ರತೆ ಹಾಗೂ ಅನ್ಯದರ ಹೇರಿಕೆಯ ಒತ್ತಡಗಳು ಪ್ರಾದೇಶಿಕತೆಯ ಉಗಮವನ್ನು ಪ್ರೇರೇಪಿಸಿದವು. ಅನ್ಯ ಎನ್ನಬಹುದಾದ ಜನಾಂಗ, ಸಂಸ್ಕೃತಿ, ಭಾಷೆಯನ್ನು ಅನಿವಾರ್ಯ ಎನ್ನುವ ಮಟ್ಟದ ಹೇರುವಿಕೆಯನ್ನು ಮೀರುವಲ್ಲಿ ಪ್ರಾದೇಶಿಕತೆಯು ಅಗತ್ಯವಾಯಿತು. ವಿಸ್ಮೃತಿಯ ಆತಂಕ ಪ್ರಾದೇಶಿಕತೆಯ ಹುಟ್ಟಿಗೆ ಕಾರಣವಾದ ಪ್ರಮುಖ ಅಂಶ.

20ನೇ ಶತಮಾನಕ್ಕೂ ಪೂರ್ವದಲ್ಲಿ ವಸಾಹತುಶಾಹಿಯ ವಿರೋಧಿಯಾಗಿ ಕಂಡುಬಂದದ್ದು ರಾಷ್ಟ್ರೀಯತೆ. ರಾಷ್ಟ್ರೀಯತೆಯನ್ನು ಬಿಂಬಿಸುವ ಈ ಅವಧಿಯ ಕಥನ ಸಾಹಿತ್ಯದಲ್ಲಿಯೂ ಪ್ರಾದೇಶಿಕತೆ ಕಂಡುಬರುತ್ತದೆ. ಈ ಸಂದರ್ಭದ ಪ್ರಾದೇಶಿಕತೆ ಅಭಿವ್ಯಕ್ತಿ ವಿಶಿಷ್ಟ ಅರ್ಥವನ್ನು ಪಡೆದಿತ್ತು. ಅದು ಈ ಹಿಂದೆ ಹೇಳಿದಂತೆ ಅನ್ಯ ಸಂಸ್ಕೃತಿಗೆ ಪ್ರತಿಯಾಗಿ ಕಂಡು ಬಂದಿರುವಂತಹದ್ದೇ ವಿನಹ ತನ್ನ ನೆಲದಲ್ಲಿ ತನ್ನನ್ನೇ ಪ್ರತಿನಿಧಿಸಿಕೊಳ್ಳಬೇಕಾದಂತಹ ಸ್ವರೂಪದ್ದಲ್ಲ. ರಾಷ್ಟ್ರೀಯತೆಯು ಜನತೆಯಲ್ಲಿ ಐಕ್ಯತೆಯನ್ನುಂಟು ಮಾಡಿತು ಎಂಬುದು ಬ್ರಿಟಿಷ್ ಆಡಳಿತದಿಂದ ಭಾರತ ಸ್ವಾತಂತ್ರ್ಯಗೊಳ್ಳುವುದಕ್ಕೆ ರೂಪುಗೊಂಡ ಸನ್ನಿವೇಶವಾಗಿತ್ತು. ಆದರೆ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಮೀರಿ ಸ್ವತಂತ್ರ್ಯ ಭಾರತದಲ್ಲಿ ಪ್ರತಿಯೊಂದು ರಾಜ್ಯವೂ ತನ್ನ ಅಸ್ತಿತ್ವಕ್ಕಾಗಿ ಹೋರಾಡಿತು. ಇದರ ಪರಿಣಾಮ ರಾಜ್ಯಗಳ ಪುನರ್ ವಿಂಗಡನೆ ಕಂಡುಬಂದಿತು. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಅನನ್ಯತೆಯನ್ನು ಹೊಂದಿದ್ದರೂ ಪುನರ್ ವಿಂಗಡಣೆಯ ಮೂಲಕ ಅಧಿಕೃತಗೊಳ್ಳುವ ಆಸಕ್ತಿಯನ್ನು ತೋರಿದವು. ಭೌಗೋಳಿಕತೆಗಿಂತ ಮುಖ್ಯವಾಗಿ ಭಾಷೆಯ ಆಧಾರದ ಮೇಲೆ ಪ್ರತ್ಯೇಕ ರಾಜ್ಯಗಳ ನಿರ್ಮಾಣವಾಯಿತು. ಈ ಹಿನ್ನೆಲೆಯಲ್ಲಿ ಒಂದು ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡಿದ್ದು,

ಒಂದು ನಿರ್ದಿಷ್ಟ ಭಾಷೆಯನ್ನು ಮಾತೃಭಾಷೆಯನ್ನಾಗಿ ಸ್ವೀಕರಿಸಿದ್ದ ಗಡಿ ಪ್ರದೇಶದ ಜನತೆಯ ಜೀವನ ಅತಂತ್ರವಾಯಿತು. ಪ್ರತಿ ರಾಜ್ಯವು ತನ್ನ ಮೇರೆಗಾಗಿ ವ್ಯಾಜ್ಯಕ್ಕಿಳಿದದ್ದು ಇತ್ತೀಚಿಗೂ ಕೊನೆಗಾಣದ ಸಮಸ್ಯೆಯಾಗಿದೆ. ಆದರೆ ಪ್ರಾದೇಶಿಕತೆಯ ಅಪೇಕ್ಷೆಯ ಮೊದಲ ಹೆಗ್ಗುರುತೆಂದು ರಾಜ್ಯ ಪುನರ್ ವಿಂಗಡಣೆಯನ್ನು ಪರಿಗಣಿಸುವುದು ತಪ್ಪೆನಿಸಲಾರದು, ಆಯಾ ರಾಜ್ಯ ತನ್ನ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳ ಬಗೆಗೆ ತನ್ನದೇ ಆದ ಸಂವೇದನೆಯನ್ನು ಹೊಂದಿದ್ದು, ಆ ಮೂಲಕ ತನ್ನ ಅನನ್ಯತೆಯನ್ನು ಸ್ಥಾಪಿಸಿದೆ. ಇದರಿಂದ ಪ್ರತಿಯೊಂದು ರಾಜ್ಯವು ಸಂಪೂರ್ಣ ಒಂದೇ ಧರ್ಮ, ಭಾಷೆ, ಜನಾಂಗ, ಸಂಸ್ಕೃತಿಯ ದ್ವೀಪವಾಗಿ ಪರಿಣಮಿಸಿದೆ ಎನ್ನಲಾಗದು. ಆದರೆ ರಾಷ್ಟ್ರೀಯತೆಯ ವ್ಯಾಪಕ ಆಯಾಮದಲ್ಲಿ ಪ್ರತಿ ರಾಜ್ಯವೂ ತನ್ನ ಅಸ್ತಿತ್ವದ ಸ್ಥಾಪನೆಗೆ ಸದಾ ಕಾತರಿಸುತ್ತಿದೆ.

ಪ್ರಾದೇಶಿಕತೆಯ ಪರಿಕಲ್ಪನೆಯು ಸಾಮಾಜಿಕವಾಗಿ ಬದಲಾವಣೆ ಮಾತ್ರವಲ್ಲ ಜೊತೆಗೆ ಸಾಹಿತ್ಯಿಕವಾಗಿಯೂ ಬದಲಾವಣೆಯನ್ನುಂಟುಮಾಡಿತು. ಸಾಹಿತ್ಯಿಕ ವಲಯದಲ್ಲಿ ಚರ್ಚಿತವಾಗುತ್ತಿದ್ದ ಯಾವುದೋ ಒಂದು ನಿರ್ದಿಷ್ಟ ಸಮುದಾಯಗಳನ್ನು ಸಂಸ್ಕೃತಿಯಿಂದ ಹೊರಗುಳಿದಿದ್ದ ಸಂಸ್ಕೃತಿ, ಸಮುದಾಯಗಳನ್ನು ಮುನ್ನೆಲೆಗೆ ತರಲು ಇಲ್ಲಿನ ಕಥನ ಸಾಹಿತ್ಯ ಪ್ರಯತ್ನಿಸಿತು. ಇದರಿಂದ ಸಾಹಿತ್ಯದ ವ್ಯಾಪಕತೆ ಕಂಡುಬಂದಿತಲ್ಲದೆ ಸಾಹಿತ್ಯಿಕ ಚಲನಶೀಲತೆಯೂ ಸಾಧ್ಯವಾಯಿತು. ನವೋದಯ, ಪ್ರಗತಿಶೀಲ, ದಲಿತ ಬಂಡಾಯ, ಸ್ತ್ರೀವಾದ, ನವ್ಯ, ನವ್ಯೋತ್ತರ ಹೀಗೆ ಬೇರೆ ಬೇರೆ ಸಾಹಿತ್ಯಿಕ ಪ್ರಯೋಗಗಳಿಗೆ ಪ್ರಾದೇಶಿಕತೆಯು ಹೊಸ ಆಯಾಮವನ್ನು ಒದಗಿಸಿತು. ವಿಶಿಷ್ಟವಾದ ಜನಾಂಗ ಅದರ ಸಂಸ್ಕೃತಿ, ಭಾಷೆಯನ್ನು ಸಾಹಿತ್ಯಕ್ಕೆ ತರುವ ಮೂಲಕ ಸೃಜನಶೀಲತೆಯನ್ನು ಅನೇಕ ಕತೆಗಾರರು ಸಾಧಿಸಿದ್ದಾರೆ.

ಸಾಹಿತ್ಯ ವಿಮರ್ಶೆಯಲ್ಲಿ ಪ್ರಾದೇಶಿಕತೆಯ ಬಗ್ಗೆ ಅದು ಸಾಹಿತ್ಯದಲ್ಲಿ ಕಂಡುಬರಬೇಕಾದ ವಿಧಾನದ ಕುರಿತು ಚರ್ಚೆಗಳಿವೆ. ಪ್ರಾದೇಶಿಕತೆಯು ಒಂದರ್ಥದಲ್ಲಿ ಸಾಹಿತ್ಯಿಕ ಬರವಣಿಗೆಯ ಒಂದು ಶೈಲಿ. ನಿರ್ದಿಷ್ಟ ಪ್ರದೇಶದ ಸಾಂಸ್ಕೃತಿಕ ಪರಿಸರ ಈ ಶೈಲಿಯನ್ನು ದಟ್ಟವಾಗಿ ಪ್ರಭಾವಿಸಿರುತ್ತದೆ. ಭೌಗೋಳಿಕ, ಭಾಷಿಕ, ಜನಾಂಗಿಕ, ಸಾಂಸ್ಕೃತಿಕ ಆಯಾಮಗಳೆಲ್ಲವುಗಳಿಂದಲೂ ಕೆಲವು ವೇಳೆ ಇವುಗಳಲ್ಲಿ ಯಾವುದಾದರೊಂದು ಆಯಾಮದಿಂದ ಪ್ರಾದೇಶಿಕತೆಯ ಅಭಿವ್ಯಕ್ತಿ ಸಾಹಿತ್ಯ ಕೃತಿಯಲ್ಲಿ ಮೂರ್ತಗೊಳ್ಳುತ್ತದೆ. ಸಾಹಿತ್ಯದ ವಿಮರ್ಶೆ ಕೇವಲ ಕೃತಿಯ ವಿಷಯಕ್ಕೆ ಮಾತ್ರವೇ ಸೀಮಿತವಾಗದೆ ಅಲ್ಲಿರುವ ಪ್ರಾದೇಶಿಕ ವಿಚಾರಗಳ ಕಡೆಗೆ ವ್ಯಾಪಿಸಿರುವುದು ಸೂಕ್ಷ್ಮ ಓದನ್ನು ಸಾಧ್ಯವಾಗಿಸಿದೆ. ಇದರಿಂದ ಈ ಹಿಂದಿನ ಹಾಗೂ ಇತ್ತೀಚಿನ ಸಾಹಿತ್ಯಿಕ ರಚನೆಯ ಶೈಲಿಯಲ್ಲಾದ ಬದಲಾವಣೆಗಳನ್ನು ತಿಳಿಯಬಹುದಾಗಿದೆ. ಒಂದು ಸಾಹಿತ್ಯ ಕೃತಿಯ ಶ್ರೇಷ್ಠತೆಯನ್ನು ತಿಳಿಸಿರುವ ಸಂದರ್ಭದಲ್ಲಿ ಅದರಲ್ಲಿನ ಪ್ರಾದೇಶಿಕ ವಿಚಾರಗಳ ಉಲ್ಲೇಖವೂ ಚರ್ಚಿತವಾಗಿರುತ್ತದೆ. ಕೃತಿಯೊಂದರ ಆಶಯದ ಅಭಿವ್ಯಕ್ತಿಗೆ ಸೂಕ್ತ ರೀತಿಯಲ್ಲಿ ಪ್ರಾದೇಶಿಕತೆಯನ್ನು ಸಂಪೂರ್ಣವಾಗಿ ಕಡೆಗಣಿಸುವ ಇಲ್ಲವೆ ಅತಿಯಾದ ಪ್ರಾದೇಶಿಕ ವಿವರಗಳಿಂದಕೂಡಿರುವ ಸಾಹಿತ್ಯ ಕೃತಿಗಳು ನಿರೀಕ್ಷಿತ ಮಟ್ಟದ ಯಶಸ್ಸನ್ನು ಕಾಣುವುದಿಲ್ಲ. "ಪ್ರಾದೇಶಿಕತೆ ಎಂಬುದು ಕಾದಂಬರಿಯಲ್ಲಿ ಕಲೆಯಾಗಬೇಕು. ಅದರ ವಿವರಗಳು ಬದುಕಿನ ವಿವರಗಳ ಜೊತೆ ಅವಿನಾಭಾವ ಸಂಬಂಧಗಳಿಸಿಕೊಂಡು ಮಾನವೀಯ ಸಂಬಂಧಗಳಿಗೆ ಪ್ರತಿಮೆಗಳಾಗಿಯೋ ಪ್ರತೀಕಗಳಾಗಿಯೋ ಬಂದಿರಬೇಕು. ಒಂದು ಪರಿಸರ ಪ್ರಪಂಚದ ರೀತಿ ರಿವಾಜುಗಳನ್ನು ನಾವು ಓದುತ್ತಿದ್ದೇವೆ ಎನ್ನುವುದಕ್ಕಿಂತ ಒಂದು ಬದುಕನ್ನು ಅದರ ಎಲ್ಲಾ ಸೂಕ್ಷ್ಮಾತಿ ಸೂಕ್ಷ್ಮ ಸಂಬಂಧಗಳ ಜೊತೆ ಸಂವೇದಿಸುತ್ತಾ ಅನುಭವಿಸುತ್ತಿದ್ದೇವೆ ಎಂಬ

ಅನುಭವವಾಗಬೇಕು" (ಶಿವರಾಮ ಕಾಡನಕುಪ್ಪ, 2003. ಪುಟ–388). ಈ ಅಭಿಪ್ರಾಯಗಳು ಪ್ರಾದೇಶಿಕತೆಯ ಒಂದು ವಿವೇಚನೆಯಿಂದ ಕೂಡ ಕಥನದ ಆಕೃತಿಯೆಂಬುದನ್ನು ತಿಳಿಸಿಕೊಡುತ್ತವೆ.

ಪ್ರಾದೇಶಿಕತೆಯ ಅಂಶಗಳು ಇಲ್ಲದೆ ಸಾಹಿತ್ಯ ಗಟ್ಟಿ ನೆಲದೊಡನೆ ತನ್ನ ಸಂಪರ್ಕವನ್ನು ಕಳೆದುಕೊಳ್ಳುತ್ತದೆ ನಿಜ. ಆದರೆ ಪ್ರಾದೇಶಿಕತೆಯೊಂದೇ ತನ್ನ ಗುಣ ವಿಶೇಷವಾಗಿರುವ ಸಾಹಿತ್ಯ ಜಗತ್ತಿನ ಮಹಾಕೃತಿಗಳೊಡನೆ ಹೆಗಲೇಣಿಯಾಗಿ ನಿಲ್ಲಲಾರದು. "ಪ್ರಪಂಚದ ಶ್ರೇಷ್ಠ ಸಾಹಿತಿಗಳೆಲ್ಲರೂ ಈ ರಾಷ್ಟ್ರೀಯತೆ, ಪ್ರಾದೇಶಿಕತೆ ಮತ್ತು ಮಾನವೀಯತೆಗಳನ್ನು ತಮ್ಮ ಕೃತಿಗಳಲ್ಲಿ ಸಮರಸವಾಗಿ ಬೆರೆಸಿರುವವರೇ ಆಗಿರುತ್ತಾರೆ". (ಸುಮತಿ, 2010. ಪುಟ–35).

ಪ್ರಾದೇಶಿಕ ಅಧ್ಯಯನದ ಸಂದರ್ಭದಲ್ಲಿ ಸಮಗ್ರ ಅಖಂಡ ಕರ್ನಾಟಕವನ್ನು ಉತ್ತರ ಕರ್ನಾಟಕ ಅಥವಾ ಮುಂಬೈ ಕರ್ನಾಟಕ, ಹೈದರಬಾದ್ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕ, ದಕ್ಷಿಣ ಕರ್ನಾಟಕ, ಮಲೆನಾಡು ಕರ್ನಾಟಕ ಹಾಗೂ ಕರಾವಳಿ ಕರ್ನಾಟಕ ಅಥವಾ ತುಳುನಾಡು ಕರ್ನಾಟಕ ಎಂಬ ಐದು ಪ್ರಾದೇಶಿಕ ಘಟಕಗಳಾಗಿ ವರ್ಗೀಕರಿಸಲಾಗುತ್ತದೆ.

ಚಾರಿತ್ರಿಕ ಅಧ್ಯಯನ, ಸಾಂಸ್ಕೃತಿಕ ಅಧ್ಯಯನ, ಅಭಿವೃದ್ಧಿ ಅಧ್ಯಯನ, ಶೈಕ್ಷಣಿಕ ಹಾಗೂ ರಾಜಕೀಯ ಅಧ್ಯಯನಗಳಿಗೆ ಸಂಬಂಧಪಟ್ಟಂತೆ ಅನ್ವಯವಾಗುವ ಈ ಪ್ರಾದೇಶಿಕತೆಯ ಪರಿಕಲ್ಪನೆಗಳನ್ನು ಸಾಹಿತ್ಯಿಕ ಅಧ್ಯಯನ ಸಂದರ್ಭದಲ್ಲೂ ಬಳಸಿಕೊಳ್ಳಲಾಗುತ್ತದೆ. ವಿವಿಧ ಪ್ರದೇಶಗಳ ಲೇಖಕರು ಆಯಾ ಪ್ರದೇಶಗಳ ವಿಶಿಷ್ಟ ಭಾಷೆ ಮತ್ತು ಸಂಸ್ಕೃತಿಗಳನ್ನು ಸೃಜನ ಶೀಲವಾಗಿ ತಮ್ಮ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಪಡಿಸಿದಾಗ ಅಂತಹ ಕೃತಿಗಳು ವಿಶಿಷ್ಟ ಪ್ರಾದೇಶಿಕ ಸಾಹಿತ್ಯಗಳಾಗಿ ರೂಪಗೊಳ್ಳುತ್ತವೆ. ಕನ್ನಡದ ಸಂದರ್ಭದಲ್ಲಿ ಕಾದಂಬರಿ ಪ್ರಕಾರವು ಇಂತಹ ಪ್ರಾದೇಶಿಕ ಸಾಹಿತ್ಯದ ಗುಣಲಕ್ಷಣಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸಿದೆ.

ಉದಾಹರಣೆಗಾಗಿ ರಾವ್ ಬಹದ್ದೂರ್ ಅವರ 'ಗ್ರಾಮಾಯಣ', ಮಿರ್ಜಿ ಅಣ್ಣಾರಾಯರ 'ನಿಸರ್ಗ' ದಂತಹ ಕಾದಂಬರಿಗಳು ಉತ್ತರ ಕರ್ನಾಟಕದ ಪ್ರಾದೇಶಿಕ ಸಾಹಿತ್ಯ ಕೃತಿಗಳಾಗಿಯೂ, ಕುಂ.ವೀರಭದ್ರಪ್ಪ, ಗೀತಾ ನಾಗಭೂಷಣ ಮುಂತಾದವರ ಸಣ್ಣಕಥೆ, ಕಾದಂಬರಿಗಳು ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಾದೇಶಿಕ ಸಾಹಿತ್ಯ ಕೃತಿಗಳಾಗಿಯೂ, ಶ್ರೀಕೃಷ್ಣ ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ ಮುಂತಾದ ಲೇಖಕರ ಸಣ್ಣಕಥೆ, ಕಾದಂಬರಿಗಳು ದಕ್ಷಿಣ ಕರ್ನಾಟಕದ ಪ್ರಾದೇಶಿಕ ಸಾಹಿತ್ಯದ ಕೃತಿಗಳಾಗಿಯೂ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' 'ಕಾನೂರು ಹೆಗ್ಗಡತಿ'ಯಂತಹ ಕಾದಂಬರಿಗಳು ಮಲೆನಾಡು ಕರ್ನಾಟಕದ ಪ್ರಾದೇಶಿಕ ಕೃತಿಗಳಾಗಿಯೂ ಶಿವರಾಮಕಾರಂತರ ಅನೇಕ ಕಾದಂಬರಿಗಳು ಕರಾವಳಿ ಕರ್ನಾಟಕ ಪ್ರದೇಶದ ಸಾಹಿತ್ಯ ಕೃತಿಗಳಾಗಿಯೂ ಗಮನ ಸೆಳೆಯುತ್ತವೆ. ಕರ್ನಾಟಕ ಕರಾವಳಿಗೆ ತನ್ನದೇ ಆದ ಸಾಂಸ್ಕೃತಿಕ ಅಸ್ಮಿತೆ ಇದೆ. ಒಂದರ್ಥದಲ್ಲಿ ಇದು ಅನಾದಿಕಾಲದಿಂದಲೂ ಪ್ರಕೃತಿದತ್ತವಾಗಿ ಒದಗಿಬಂದದ್ದು ಎನ್ನಬಹುದು. ಇಲ್ಲಿನ ಮಣ್ಣಿನ ಗುಣದಲ್ಲಿಯೇ ಸಾಂಸ್ಕೃತಿಕ ಅನನ್ಯತೆ ಅಡಗಿದೆ. ಕರ್ನಾಟಕದ ಇತರೆಡೆಗಳಿಗೆ ಹೋಲಿಸಿದರೆ ಕರಾವಳಿಯ ಪರಿಸರದಲ್ಲಿ ಗುರುತಿಸಬಹುದಾದ ಸಂಸ್ಕೃತಿಯ ಚಿತ್ತಾರ ತುಸು ವಿಶಿಷ್ಟವಾದುದು. ಯಕ್ಷಗಾನ, ಭೂತಾರಾಧನೆ, ನಾಗಮಂಡಲ, ಕಂಬಳ, ಕೋಳಿಅಂಕ, ಕಾಡ್ಯನಾಟ, ಹೂವಿನ ಕೋಲು ಮೊದಲಾದ ಸಾಂಸ್ಕೃತಿಕ ಗುರುತುಗಳು ಇಲ್ಲಿನ ಜನಜೀವನದೊಂದಿಗೆ ಹಾಸು ಹೊಕ್ಕಾಗಿವೆ. ಕಡಲ ಕಿನಾರೆ, ಮೀನುಗಾರಿಕೆ, ಕೈಮಗ್ಗ ಉದ್ಯಮ ಮೊದಲಾದವುಗಳು ಇಲ್ಲಿನ ಸಂಸ್ಕೃತಿಯೊಂದಿಗೆ ಬೆರೆತುಹೋಗಿವೆ. ಕನ್ನಡದ ಹಲವು ಪ್ರಾದೇಶಿಕ ಮತ್ತು ಸಾಮಾಜಿಕ ಭಾಷೆ ಪ್ರಬೇಧಗಳನ್ನು

ಕರಾವಳಿಯುದ್ದಕ್ಕೂ ಕಾಣಲು ಸಾಧ್ಯವಿದೆ. ಕುಂದಾಪುರ ಕನ್ನಡ, ಹವ್ಯಕ, ಗೌಡ ಕನ್ನಡ, ಕೊರಗ ಭಾಷೆ ಮೊದಲಾದ ತುಳು, ಕೊಂಕಣಿ ಮರಾಠಿ ಮೊದಲಾದ ಆಡುನುಡಿಗಳು, ಆಯಾ ಸಮುದಾಯದ ಸಾಂಸ್ಕೃತಿಕ ಚಹರೆಗಳಿಗೆ ಇಂದಿಗೂ ಸಾಕ್ಷಿಯಾಗಿವೆ. ಕರಾವಳಿ ಪರಿಸರದ ಸಾಂಸ್ಕೃತಿಕ ಬದುಕಿನ ವಿವರಗಳನ್ನು ದಾಖಲಿಸುವ ಪ್ರಜ್ಞಾಪೂರ್ವಕ ಪ್ರಯತ್ನ ಆ ಪರಿಸರದ ಅನೇಕ ಮಂದಿ ಬರಹಗಾರರ ಕತೆ, ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಸೃಜನಶೀಲ ಸಾಹಿತ್ಯ ಪ್ರಕಾರಗಳ, ರೂಪಗಳ ಮೂಲಕ ಇಲ್ಲಿನ ಬಹುಮುಖಿ ಪ್ರಾದೇಶಿಕ ಸಂಸ್ಕೃತಿಯ ವಿಭಿನ್ನ ಆಯಾಮಗಳನ್ನು ಪರಿಚಯಿಸುವಲ್ಲಿ ಹಲವು ಮಂದಿ ಲೇಖಕರು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಸುಮಾರು ಒಂದು ಶತಮಾನದಷ್ಟು ಸುಧೀರ್ಘ ಚರಿತ್ರೆಯನ್ನು ಹೊಂದಿರುವ ಆಧುನಿಕ ಕನ್ನಡ ಕಾದಂಬರಿಗೆ ಕರ್ನಾಟಕ ಕರಾವಳಿಯ ಲೇಖಕರ ಮತ್ತು ಕೃತಿಗಳ ಕೊಡುಗೆ ಅತ್ಯಂತ ನಿರ್ಣಾಯಕವೆನಿಸಿದೆ. ಗುಲ್ವಾಡಿ, ಕಾರಂತ, ಅಡಿಗ ಮೊದಲಾದವರಿಂದ ತೊಡಗಿ ಇಂದಿನವರೆಗೂ ನೂರಾರು ಮಂದಿ ಲೇಖಕರು ತಮ್ಮ ವೈವಿಧ್ಯಮಯ ಕಥನಗಳ ಮೂಲಕ ಕರಾವಳಿಯ ಸಾಂಸ್ಕೃತಿಕ ಗುರುತುಗಳನ್ನು ಅನಾವರಣಗೊಳಿಸಿದ್ದಾರೆ. ಇಪ್ಪತ್ತನೇ ಶತಮಾನದ ಆರಂಭದಿಂದ ತೊಡಗಿ ಇಂದಿನವರೆಗೂ ವಿಭಿನ್ನ ಸಮುದಾಯಗಳ ಲೇಖಕರುಗಳಿಂದ ರೂಪಿಸಲ್ಪಟ್ಟ ಬಹುಬಗೆಯ ಕಾದಂಬರಿಗಳಲ್ಲಿ ಇಲ್ಲಿನ ಜನಜೀವನ, ಆಚಾರ–ವಿಚಾರ, ನಡೆ–ನುಡಿ, ಆಚರಣೆ–ಆರಾಧನೆ ಎಲ್ಲವೂ ಪ್ರತಿಫಲನಗೊಂಡಿರುವುದನ್ನು ಕಾಣಬಹುದಾಗಿದೆ. ಹಲವು ಮಹತ್ವದ ಮತ್ತು ಜನಪ್ರಿಯ ಕಾದಂಬರಿಗಳ ಕುರಿತು ಈಗಾಗಲೇ ವಿಭಿನ್ನ ಬಗೆಯ ಅಧ್ಯಯನಗಳು ನಡೆದಿವೆ.

ದಕ್ಷಿಣ ಕನ್ನಡದ ಪ್ರಾದೇಶಿಕತೆಯನ್ನು ಕಾರಂತರ ಬಹುತೇಕ ಕಾದಂಬರಿಗಳು ದಾಖಲಿಸಿವೆ. 'ಚೋಮನದಂಡಿ'ಯಲ್ಲಿಯೇ ಕಾರಂತರ ಪ್ರಾದೇಶಿಕ ಪ್ರಜ್ಞೆಯನ್ನು ನಾವು ನೋಡಬಹುದು. ಒಳಗಿನ ಆವರಣವನ್ನು ಸ್ಪಷ್ಟವಾಗಿ ಚಿತ್ರಿಸಿರುವ ಕಾದಂಬರಿಕಾರರು ಹೊರಗಿನ ಆವರಣವನ್ನು ಕೂಡ ಅಷ್ಟೇ ಶಕ್ತಿಯುತವಾಗಿ ಚಿತ್ರಿಸಿದ್ದಾರೆ. ಕಥೆಯ ಆರಂಭದಲ್ಲೇ ಇದನ್ನು ಕಾದಂಬರಿಕಾರರು ಸಾಧಿಸತೊಡಗುತ್ತಾರೆ. ಕೃತಿಯ ಪ್ರಾರಂಭದ ವರ್ಣನೆ ಇಲ್ಲಿ ಅರ್ಥಪೂರ್ಣವಾಗುತ್ತದೆ. "ಕತ್ತಲೆಂದರೆ ಕತ್ತಲು, ಕಣ್ಣಿಗೆ ಕಣ್ಣು ತಾಗಿಸಿದರೆ ಏನೂ ಕಾಣುವಹಾಗಿಲ್ಲ. ಚಂದ್ರನು ಮೂಡುವುದಕ್ಕೆ ಇನ್ನು ಎರಡು ಘಳಿಗೆಯಿರಬಹುದು. ಕಾಡುಗುಡ್ಡಗಳ ಭೀಕರ ಕತ್ತಲನ್ನು ಕಡಿದು ಒಮ್ಮೆಯಾದರೂ ಜೀವದ ಚಿಹ್ನೆಯನ್ನು ತೋರಲು ಮಿಣುಕುಹುಳುಗಳು ಸಹ ಮಿನುಗುವುದಿಲ್ಲ...." ಹೀಗೆ ಸಾಗುವ ವರ್ಣನೆ ಹಳ್ಳಿಯ ಹೊರಗೆ ಕಾಡಲ್ಲಿರುವ ಜೋಮನ ಗುಡಿಸಲಿನ ಸುತ್ತಮುತ್ತಲಿನ ಪ್ರಾಕೃತಿಕ ವರ್ಣನೆಯನ್ನು ಕೊಡುತ್ತದೆ. ಕಾರಂತರ ಪ್ರಾದೇಶಿಕ ಚಿತ್ರಣದಲ್ಲಿ ಅವರ ಪ್ರಾದೇಶಿಕ ಪ್ರಜ್ಞೆಯ ಅರಿವು ನಮಗಾಗದಿರದು. ಕಾಡಿನ ಪರಿಸರ, ಧನಿಯರ ಮನೆಗೆ ಕೆಲಸಕ್ಕೆ ಹೋಗುವ ತಂದೆ ಮಕ್ಕಳು, ಹರಿಜನರಾದ ಕಾರಣ ಅವರು ಆಹಾರ, ದನಿಯ ಮನೆಯ ಕೆಲಸದೊಂದಿಗೆ ತನ್ನವರ ಆರೈಕೆ, ಬುಟ್ಟಿ ನೇಯುವ ಬೆಳ್ಳಿ ಲೇಖಕರ ಪ್ರಾದೇಶಿಕ ಪ್ರಜ್ಞೆಗೆ ಕನ್ನಡಿಯಾಗುತ್ತದೆ.

'ಬೆಟ್ಟದ ಜೀವ'ದಲ್ಲೂ ಪ್ರಕೃತಿಯ ತನ್ನದಾದ ಮೇಲುಗೈಯನ್ನು ನಾವು ಕಾಣಬಹುದು. ಪ್ರಕೃತಿಯ ಮಗುವಾಗಿ ನಿಸರ್ಗದ ಬಂದು ಅವಿಭಾಜ್ಯ ಅಂಗವಾಗಿ ಬದುಕುವ ಅವರು ನಿಸರ್ಗದ ಸನ್ನಿಧಿಯಲ್ಲಿ ಸಮಭಾವದಲ್ಲಿದ್ದುಕೊಂಡು ಅಲ್ಲಿ ಬರುವ ಹೂವು, ಗಿಡ, ಬಂಡೆ, ನದಿಗಳು ನಿಸರ್ಗದ ಭಾಗವಾಗಿರುವವುದರಲ್ಲಿಯೇ ಸಾರ್ಥಕತೆಕಂಡುಕೊಂಡು ಬದುಕುವ ಒಂದು ಜೀವನ ಪ್ರಪಂಚವಾಗಿದೆ. ಗೋಪಾಲಯ್ಯ ಬೆಟ್ಟದ ಜೀವವಾದ್ದರಿಂದ ಬೆಟ್ಟದ ಘಟ್ಟದ ಹಿನ್ನೆಲೆ ಅನಿವಾರ್ಯವಾಗುತ್ತದೆ. ಪ್ರಕೃತ್ತಿಯೊಂದಿಗೆ ಸೆಣಸಿ

ಕೆಲವೊಮ್ಮೆ ಜಯ ಪಡೆದು ಕೆಲವೊಮ್ಮೆ ಸೋತು ಒಪ್ಪಂದ ಮಾಡಿ ಬದುಕುವ ಗೋಪಾಲಯ್ಯ 'ನಿಸರ್ಗ'ದ ಮಗುವಾಗುತ್ತಾರೆ. ಘಟ್ಟದ ಮೇಲಿನ ನೈಜಜೀವನ ಕಾರಂತರ ಅನುಭವದ ರಸಘಟ್ಟವೆಂದು ಕರೆಯಬಹುದು. ಗೋಪಾಲಯ್ಯನವರ ಒಳಮನಸ್ಸಿನಲ್ಲಿ ಬೇಸರ ತುಂಬಿದ್ದರೂ ಅವರು ಪ್ರಕೃತಿಯನ್ನು ಪ್ರೀತಿಸದಿರಲಾರರು, ದಾರಿಯಲ್ಲಿ ಹಪ್ಪಳ ಸುಟ್ಟ ವಾಸನೆ ಬಂದರೆ ಅದು ಕನ್ನಡಿ ಹಾವಿನದೆಂದು ಹೇಳುವ ಅವರು ಪ್ರಕೃತಿಯ ಜೊತೆ ಒಂದಾಗುತ್ತಾರೆ. ಅಬ್ಬಿಯ ನೀರು ಕಡಿಮೆ ಆದಾಗ ತಕ್ಷಣ ಕಾರಣ ತಿಳಿಯುವ ಅವರು ಕೃಷಿಕ ಜೀವನದಲ್ಲಿ ಉತ್ಸಾಹವುಳ್ಳವರು. ಪ್ರಕೃತಿಯನ್ನು ಬೆಟ್ಟಗುಡ್ಡಗಳಿಂದ ತುಂಬಿದ ಈ ನಾಡಿನ ಮುಖ್ಯ ವಿವರಗಳನ್ನು ಕಾರಂತರು ಇಲ್ಲಿ ಬಹಳ ಮುಕ್ತಿಯಿಂದ ಅಳವಡಿಸಿದ್ದಾರೆ. ಅಬ್ಬಿಯ ನೀರು, ಕಾಟುಮೂಲೆಯ ಆನೆಯ ದಾಳಿ, ಸಾಗುವಳಿಯಾಗದ ಪ್ರಾಕೃತ ಭೂಮಿ, ಕಾಡಿನ ನಿರ್ಜನತೆ ಇಲ್ಲಿ ಎಲ್ಲಾ ಒಂದಾಗಿ ಒಂದು ರಹಸ್ಯ ಲೋಕವನ್ನು ನಮ್ಮೆದುರು ತೆರೆದಿಡುತ್ತವೆ. ಮಗಳಿಂದ ಅಗಲಿ ದೂರವಾಗಿ, ಮಗ ಎಲ್ಲಿರುವನೆಂದು ತಿಳಿಯದೆ ದುಃಖವನ್ನು ಅದುಮಿಟ್ಟು ಪ್ರಕೃತಿಯೊಂದಿಗೆ ಒಂದಾಗಿ ಬಾಳುವ ಗೋಪಾಲಯ್ಯ ಇತರರಿಗೂ ದಾರಿ ತೋರುವಲ್ಲಿ ಕಾರಂತರ ಪ್ರಜ್ಞೆ ಅಡಗಿರುತ್ತದೆ.

ಕಾರಂತರ 'ಮರಳಿ ಮಣ್ಣಿಗೆ'ಯಲ್ಲಿ ಕಡಲು, ಮಳೆ, ಬೆಳೆ, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಇತ್ಯಾದಿಗಳ ವಿವರಗಳು ಬಂದಿದ್ದು ಅದು ಪ್ರಾದೇಶಿಕತೆಯ ಬಗ್ಗೆ ಅರಿವನ್ನು ನೀಡುತ್ತದೆ. ಆದರೆ ಕಾದಂಬರಿಯನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ವಿವರವನ್ನು ಬಣ್ಣಿಸುವುದು ಅವರ ಮುಖ್ಯ ಉದ್ದೇಶವಲ್ಲವೆಂಬುದು ನಮಗೆ ಸ್ಪಷ್ಟವಾಗುತ್ತದೆ. ಅವುಗಳನ್ನು ವರ್ಣಿಸುವುದರಲ್ಲಿ ಅವರಿಗೆ ವಿಶೇಷತೆ ಕಂಡು ಬಂದಿದ್ದರೂ ಇಲ್ಲಿ ಬಾಳ್ವೆ ನಡೆಸಿದವರಿಗೆ ಇಲ್ಲಿಯ ಪರಿಸರ ಹೇಗೆ ಕಂಡಿತೆಂಬುದು ಅವರ ಮುಖ್ಯ ದೃಷ್ಟಿಯಾಗಿದೆ. ಹೀಗಾಗಿ 'ಮರಳಿ ಮಣ್ಣಿಗೆ'ಯಲ್ಲಿ ಕಡಲು, ಮಳೆ, ಗಾಳಿ, ಹಸಿರುಗಳ ಚೆಲುವಿನಷ್ಟೆ ಆ ಪರಿಸರದಲ್ಲಿ ಬಾಳುವವವರ ಕಷ್ಟದ ದುಡಿಮೆ ಮತ್ತು ಅದರ ಏಕತಾನಗಳೂ ಮುಖ್ಯವಾಗಿವೆ. ಈ ಕಾದಂಬರಿಯಲ್ಲಿ ಬರುವ ಕೋಡಿ, ಪಡುಕರೆ, ಕುಂದಾಪುರ, ಉಡುಪಿ, ಮಂಗಳೂರುಗಳ ವಿವರವನ್ನು ಮೀರಿದ ಒಂದು ದೊಡ್ಡ ಹೋರಾಟದಲ್ಲಿ ಇಲ್ಲಿ ಬರುವ ಪಾತ್ರಗಳು ತೊಡಗಿವೆ. ಅದೂ ಅಲ್ಲದೆ ಈ ಪ್ರಾದೇಶಿಕ ಪರಿಸರ ಪಾತ್ರಗಳ ಜೀವನ ನಾಟಕಕ್ಕೆ ಹಿಂಬದಿಯ ಒಂದೆ ಪರದೆಯಂತಾಗಿದೆ ಪಾತ್ರಗಳ ಜೊತೆಗೆ ಅವಿನಾಭಾವ ಸಂಬಂಧವನ್ನು ಪಡೆದುಕೊಂಡಿದೆ.

ಇಲ್ಲಿ ಮೊದಲ ಪುಟಗಳಲ್ಲಿ ರಾಮೈತಾಳರ ಮನೆಯಲ್ಲಿ ಇರುವ ಹೆಂಗಸರು ಐತಾಳರ ತಂಗಿ ಸರಸ್ವತಿ ಮತ್ತು ಹೆಂಡತಿ ಪಾರೋತಿಯ ದಿನನಿತ್ಯದ ಕಷ್ಟದ ದುಡುಮೆಯನ್ನು ಪ್ರಾದೇಶಿಕತೆಯ ಸಾಲಿಗೆ ಸೇರಿಸಬಹುದು. ಕಾದಂಬರಿಯಲ್ಲಿ ಬರುವ ಸರಸೋತಿಯ ಸಾವು ಕೂಡಾ ಪ್ರಾದೇಶಿಕತೆಯ ಎಲ್ಲೆ ಮೀರುವಂತಹದು. ಅವಳ ಬದುಕಿನ ಪವಿತ್ರತೆಯಂತೆ ಅದು ಅಷ್ಟೇ ಗಂಭೀರತೆಯನ್ನು ಪಡೆದುಕೊಂಡಿದೆ. ಒಂದು ಮಹಾಲಯ ಅಮಾವಾಸ್ಯ ದಿನ ಕಡಲ ಸ್ನಾನ ಮಾಡಿದ ಅವಳು ಪಿತೃಗಳನ್ನು ನೆನಪು ಮಾಡಿಕೊಂಡೇ ತೀರಿಕೊಳ್ಳುತ್ತಾಳೆ. ಇಲ್ಲಿ ಪ್ರಾದೇಶಿಕ ವಿವರಗಳನ್ನು ಮೀರಿದ ಒಂದು ಸಂಸ್ಕೃತಿ ನಾವು ಕಾಣುತ್ತೇವೆ.

'ಕರುಳಿನ ಕರೆ'ಯಲ್ಲಿ ಕೂಡಾ ಪ್ರಾದೇಶಿಕತೆಯ ನಿಸರ್ಗದ ಪ್ರಭಾವವನ್ನು ಕಾಣಬಹುದು. ಕಾದಂಬರಿಯಲ್ಲೂ ಗಂಗೆಯ ಗಂಡ ಹಿರಣ್ಣಯ್ಯ ಯಾತ್ರೆ ನಂತರ ನಡೆಸುವ ಕಾಶೀ ಸಮಾರಾಧನೆ ಪ್ರಾದೇಶಿಕತೆಯ ಅಂಶವಾಗುತ್ತದೆ. ಈ ಕಾದಂಬರಿಯಲ್ಲಿಯೂ ಹಚ್ಚ ಹಸಿರು, ಬೆಟ್ಟಗುಡ್ಡ, ಪ್ರಕೃತಿಯ ವರ್ಣನೆಯನ್ನು ಲೇಖಕರು ಮಾಡಿದ್ದಾರೆ. ಕಾದಂಬರಿಯ ಏಳನೆಯ ಅಧ್ಯಾಯದಲ್ಲಿ ಹೆಣ್ಣು ಜನ್ಮದ ಕಷ್ಟಗಳೇ ಇಬ್ಬರು ಮುದಿಕಿಯರ ರೂಪತಾಳಿ

ಮೇಲೆ ಆಕಾಶ ಕೆಳಗೆ ಭೂಮಿ ಇವುಗಳ ಮಧ್ಯೆ ಮಾತನಾಡುತ್ತ ಕುಳಿತಂತೆ ಭಾಸವಾಗುತ್ತದೆ.

ಕಾರಂತರ ಕಾದಂಬರಿಗಳು ವ್ಯಕ್ತಪಡಿಸುವ ಬಹುತೇಕ ಸಂಗತಿಗಳು ದಕ್ಷಿಣದ ಮೇಲ್ವಂಕ್ತಿಯ ಸಮುದಾಯದ ಸಾಂಸ್ಕೃತಿಕ ಬದುಕಿನ ಚಿತ್ರಣಕ್ಕೆ ಮಾತ್ರ ಸೀಮಿತಗೊಂಡಿಲ್ಲ, ಸಮಾಜದ ಇತರ ವರ್ಗಗಳು, ಸಮುದಾಯಗಳು ಸೇರಿದಂತೆ ತಳಸ್ತರದ ಸಮುದಾಯಗಳು ಪ್ರಾತಿನಿಧ್ಯ ಪಡೆಯುತ್ತದೆ. ಪ್ರಾದೇಶಿಕತೆ ಕಾರಂತರ ಕಾದಂಬರಿಗಳಲ್ಲಿಗೆ ತುಂಬು ಜೀವಂತಿಕೆ ನೀಡಿರುವ ಅಂಶವಾಗಿದೆ. ದೇಶಿಯತೆಯ ಸೊಬಗಿನಿಂದಾಗಿ ಇವರ ಬರಹಗಳು ಮೆರಗು ವೃದ್ಧಿಯಾಗಿದೆ. ಪ್ರಾದೇಶಿಕತೆ ಇವರ ಕಾಂದಬರಿಗಳಲ್ಲಿ ವಿಶಿಷ್ಟವಾಗಿ ಪ್ರಕಟವಾಗಿರುವುದನ್ನು ಗಮನಿಸಬಹುದು. ಕಾರಂತರ ಕಾದಂಬರಿಗಳಲ್ಲಿ ಪ್ರಾದೇಶಿಕತೆಯನ್ನು ಮೀರಿದ ಒಂದು ಸರ್ವವ್ಯಾಪಿ ಸಂಸ್ಕೃತಿಯನ್ನು ನಾವು ಕಾಣಬಹುದು. ಕಾರಂತರ ಎಲ್ಲಾ ಕಾದಂರಿಗಳು ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡು ಮುಂದುವರಿಯುತ್ತವೆ. ಹೀಗೆ ಕನ್ನಡ ಸಂದರ್ಭದಲ್ಲಿ ದೇಶಿವಾದ, ದೇಶಿಯತೆ, ದೇಶಿ ಸಂಸ್ಕೃತಿ, ಪ್ರಾದೇಶಿಕತೆ ಮುಂತಾದ ಪರಿಕಲ್ಪನೆಗಳ ಭಾಗವಾಗಿ ಬೆಳೆದು ಬಂದ 'ಪ್ರಾದೇಶಿಕ ಸಾಹಿತ್ಯ'ದ ಪರಿಕಲ್ಪನೆಯೂ ಸಾಹಿತ್ಯಧ್ಯಯನದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದಿಕೊಂಡಿದೆ. ಹಾಗೂ ರಾಜಕೀಯ ಅಧ್ಯಯನಗಳಂತೆ ಸಾಹಿತ್ಯ ಅಧ್ಯಯನದಲ್ಲಿಯೂ ಈ ಪ್ರಾದೇಶಿಕ ಪರಿಕಲ್ಪನೆಯು ತನ್ನದೇ ಆದ ವಿಶಿಷ್ಟ ಪಾತ್ರವನ್ನು ವಹಿಸುತ್ತದೆ. ಕರಾವಳಿ ಕರ್ನಾಟಕ ಅಥವಾ ತುಳು ನಾಡು ಕರ್ನಾಟಕದ ಪ್ರಾದೇಶಿಕ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಶಿವರಾಮ ಕಾರಂತರಿಂದ ಆರಂಭಗೊಂಡ ಸಾಹಿತ್ಯ ಪರಂಪರೆ ಸಮಕಾಲೀನ ಸಂದರ್ಭದಲ್ಲಿ ಹಲವು ಲೇಖರ ಸಾಹಿತ್ಯ ಕೃತಿಗಳ ಮೂಲಕ ವಿಭಿನ್ನ ಆಯಾಮಗಳನ್ನು ಪಡೆದುಕೊಂಡು ಬೆಳೆದು ನಿಂತಿದೆ.

**ಪರಾಮರ್ಶನ ಗ್ರಂಥಗಳು**


- ಅಮೂರ, ಜಿ.ಎಸ್. (2003). *ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ.* ಪ್ರಿಯದರ್ಶಿನಿ ಪ್ರಕಾಶನ.
- ಮಲ್ಲಿಕಾರ್ಜುನ, ಹೆಚ್. (2007). *ಪ್ರಾದೇಶಿಕತೆಯ ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಕಥನ ಸಾಹಿತ್ಯ (ವೀರಭದ್ರ ಮತ್ತು ಕುಂ. ವೀರಭದ್ರ ಅವರ ಕಥೆಗಳ ಮುಖೇನ).*
- ಪ್ರತಾಪಚಂದ್ರ ಶೆಟ್ಟಿ ಹಳ್ನಾಡು. (2010). *ಕಾದಂಬರಿಗಳಲ್ಲಿ ಪ್ರಾದೇಶಿಕ ಸಂಸ್ಕೃತಿ ಪ್ರಭಾವ ನೀರ್ ಮಾರ್ಗರ ಕಾದಂಬರಿಗಳ ಮರು ಓದು.* ಹೇಮಾವತಿ ಪ್ರಕಾಶನ.
- ರಾಘವೇಂದ್ರರಾವ್, ಹೆಚ್.ಎಸ್. (2001). *ಶತಮಾನದ ಸಾಹಿತ್ಯ ವಿಮರ್ಶೆ.*
- ಶಾಂತಿನಾಥ ದೇಸಾಯಿ. (1990). ನವ್ಯ ಸಾಹಿತ್ಯ ದರ್ಶನ, ಪರಿಸರ ಸಾಹಿತ್ಯ ಪ್ರಕಾಶನ.
- ಸುಮತಿ. (2010). *ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಪ್ರಾದೇಶಿಕ ಸಂವೇದನೆ.* (ಅಪ್ರಕಟಿತ, ಪಿಎಚ್.ಡಿ. ಮಹಾಪ್ರಬಂಧ).